ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/31/ಸುತ್ತೋಲೆ/2016-17/ರೂಸಾ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
ಬೆಂಗಳೂರು-01. ದಿ: 30.05.2018
ದೂ.ಸಂ.080-22343905

**"ಸುತ್ತೋಲೆ"**

**ವಿಷಯ:** ರೂಸಾ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸಲಾದ ಕಾರ್ಯಕ್ರಮಗಳಿಂದ ದೊರೆತ ಪ್ರಯೋಜನದ ಬಗ್ಗೆ ವಿದ್ಯಾರ್ಥಿಗಳಿಂದ ಅಭಿಪ್ರಾಯಗಳನ್ನು ಸಂಗ್ರಹಿಸುವ ಕುರಿತು.

**ಉಲ್ಲೇಖ:** ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಈ-ಮೇಲ್ ಸಂದೇಶ ದಿನಾಂಕ: 29-05-2018.

******

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಈ-ಮೇಲ್ ಸಂದೇಶದಲ್ಲಿ ತಿಳಿಸಿರುವಂತೆ, ರಾಷ್ಟ್ರೀಯ ಉಚ್ಚತರಾ ಶಿಕ್ಷಾ ಅಭಿಯಾನ್ (ರೂಸಾ) ಯೋಜನೆಯಡಿಯಲ್ಲಿ ವಿವಿಧ ಕಾಂಪೋನೆಂಟ್‌ಗಳಲ್ಲಿ ಆಯ್ಕೆಯಾದ ಕಾಲೇಜು ಶಿಕ್ಷಣ ಇಲಾಖೆಯ 94 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸದರಿ ಯೋಜನೆಯಡಿಯಲ್ಲಿ ಕಾಲೇಜುಗಳಿಗೆ ಈಗಾಗಲೇ ಐಸಿಟಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ. ಸದರಿ ಕಾರ್ಯಕ್ರಮಗಳನ್ನು ವಿದ್ಯಾರ್ಥಿಗಳು ಯಶಸ್ವಿಯಾಗಿ ಉಪಯೋಗಿಸಿಕೊಂಡು ಶೈಕ್ಷಣಿಕವಾಗಿ ಹಾಗೂ ಭೌತಿಕವಾಗಿ ಪಡೆದ ಪ್ರಯೋಜನಗಳು ಹಾಗೂ ಪ್ರಗತಿಯ ಕುರಿತಂತೆ ಪ್ರತಿ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳಿಂದ ಅಭಿಪ್ರಾಯ ಪಡೆಯುವುದು. ಹೀಗೆ ವಿದ್ಯಾರ್ಥಿಗಳಿಂದ ಪಡೆದ ಅಭಿಪ್ರಾಯಗಳಲ್ಲಿ ಉತ್ತಮ ಗುಣಮಟ್ಟದ **(Testimonials in good quality and of one minute duration video, with college name and RUSA logo at the background)** ಹೇಳಿಕೆ ನೀಡಿರುವ ಒಂದು ನಿಮಿಷದ ವಿಡಿಯೋ ಚಿತ್ರೀಕರಣವನ್ನು ಮಾಡಿ ಹಾಗೂ ಇದರ ಸಂಭಾಷಣೆಯನ್ನು English Subtitle ನಲ್ಲಿ ಭಾಷಾಂತರಿಸಿ **ದಿನಾಂಕ:05-06-2018 ರೊಳಗೆ** ಈ ಕೆಳಕಂಡ ರೂಸಾ ಈ-ಮೇಲ್ ವಿಳಾಸಕ್ಕೆ ಕಳುಹಿಸಿಕೊಡಲು ಸೂಚಿಸಲಾಗಿದೆ.

**RUSA E-mail ID: dce.rusa2016@gmail.com**

**ಕಾಲೇಜು ಶಿಕ್ಷಣ ಆಯುಕ್ತರು**

**ಇವರಿಗೆ:-**

1. ರೂಸಾ ಯೋಜನೆಗೊಳಪಟ್ಟಿರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಮುಂದಿನ ಅಗತ್ಯ ಕ್ರಮಕ್ಕಾಗಿ.
2. ಜಂಟಿ ನಿರ್ದೇಶಕರುಗಳು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಬೆಂಗಳೂರು,ಮೈಸೂರು,ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲಬುರಗಿ – ಮಾಹಿತಿಗಾಗಿ.
3. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತ್, ನಂ.30, ಪ್ರಸನ್ನಕುಮಾರ್ ಬ್ಲಾಕ್, ಸೆಂಟ್ರಲ್ ಯುನಿವರ್ಸಿಟಿ ಕ್ಯಾಂಪಸ್, ವೈ. ರಾಮಚಂದ್ರ ರಸ್ತೆ, ಬೆಂಗಳೂರು-560009.
4. ಮಾಹಿತಿ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು- ಸುತ್ತೋಲೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
5. ಕಛೇರಿ ಪ್ರತಿ.